## ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ರಾಮನಗರ.

ಸಿ.ಸಿ. ನಂ.23/2018

CW-1/PW-2

| | | |
|---|---|---|
| ಹೆಸರು | : | ಶೃತಿ ಜನನಿ |
| ತಂದೆ ಹೆಸರು | : | ಬಾಲಾಜಿ |
| ವಯಸ್ಸು | : | 31 ವರ್ಷ |
| ವೃತ್ತಿ | : | ಐ ಟಿ ಕಂಪನಿಯಲ್ಲಿ ಕೆಲಸ |
| ವಾಸ ಸ್ಥಳ | : | ಚೆನ್ನೈ |
| ದಿನಾಂಕ | : | 23-10-2025. |

ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆ ಮಾನ್ಯ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-

ದಿನಾಂಕಃ 26.11.2016ರಲ್ಲಿ ನಾನು ಚೆನ್ನೈ ನಿಂದ ಮೈಸೂರಿಗೆ ಕಾವೇರಿ ಎಕ್ಸ್ ಪ್ರೆಸ್ ಟ್ರೇನ್ ನಲ್ಲಿ ಪ್ರಯಾಣಿಸುತ್ತಿದ್ದಾಗ ಬೆಳಿಗ್ಗೆ 5.30 ಗಂಟೆಗೆ ಬೆಂಗಳೂರು ರೈಲ್ವೆ ಸ್ಟೇಷನ್ ಬಿಟ್ಟ ನಂತರ ನನ್ನ ಬ್ಯಾಗನ್ನು ನನ್ನ ತಲೆ ಕೆಳಗೆ ಇಟ್ಟುಕೊಂಡು ಟ್ರೇನ್ ನಲ್ಲಿ ಮಲಗಿದ್ದಾಗ ಒಬ್ಬ ಆಸಾಮಿ ಎತ್ತುಕೊಂಡು ಓಡಿ ಹೋದನು. ಅದರಲ್ಲಿ ನನ್ನ ಡೆಬಿಟ್ ಕಾರ್ಡ್, ಆಧಾರ ಕಾರ್ಡ್, ಪ್ಯಾನ್ ಕಾರ್ಡ್ ಮತ್ತು ನನ್ನ ಪರ್ಸ್ ಇಟ್ಟಿದ್ದೆ. ನನ್ನ ಪರ್ಸ್ ನಲ್ಲಿ ರೂ. 1,100/- ಇತ್ತು. ಮೈಸೂರು ರೈಲ್ವೆ ಪೊಲೀಸ್ ಠಾಣೆಯಲ್ಲಿ ಈ ಬಗ್ಗೆ ದೂರು ನೀಡಿರುತ್ತೇನೆ. ದೂರನ್ನು ನೋಡಿದರೆ ಗುರುತಿಸಬಲ್ಲೆ. ಕೇಸಿನ ಕಡತದಲ್ಲಿ ದೂರಿನ ದೃಢೀಕೃತ ಪ್ರತಿ ನಕಲು ಮಾತ್ರ ಇರುತ್ತದೆ, ದೂರಿನ ಮೂಲ ಪ್ರತಿ ರೈಲ್ವೆ ಪೊಲೀಸ್ ಠಾಣೆ, ಮೈಸೂರು ಇಲ್ಲಿಂದ ಬಂದಿರುವುದಿಲ್ಲ. ದೂರಿನ ದೃಢೀಕೃತ ಪ್ರತಿಯನ್ನು

**ನಿಪಿ-7** ಎಂದು ಗುರುತಿಸಲಾಯಿತು. ನಿಪಿ 7 ರಲ್ಲಿ ನನ್ನ ಸಹಿ ಗುರುತಿಸಿರುತ್ತೇನೆ. ನಂತರ ಏನಾಯಿತು ಎಂದು ನನಗೆ ಜ್ಞಾಪಕ ಇಲ್ಲ. ನನಗೆ ಹಣ ಸಿಕ್ಕಿರುವುದಿಲ್ಲ, ನನ್ನ ಡೆಬಿಟ್ ಕಾರ್ಡ್, ಆಧಾರ ಕಾರ್ಡ್, ಪ್ಯಾನ್ ಕಾರ್ಡ್ ಮತ್ತು ನನ್ನ ಪರ್ಸ್ ಸಹ ಸಿಕ್ಕಿರುವುದಿಲ್ಲ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು.
ರಾಮನಗರ.